ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನಡವಳಿಗಳು

ವಿಷಯ : 2024-25ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರುಗಳಿಗೆ ಮಾರ್ಚ್-2024, ಏಪ್ರಿಲ್-2024 ಮತ್ತು ಮೇ-2024ರ ಮಾಹೆಗಳ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ : ಎಫ್ ಡಿ 02 ಟಿ ಎಫ್ ಪಿ 2024ಬೆಂಗಳೂರು ದಿನಾಂಕ 01.04.2024
2. ಸರ್ಕಾರದ ಆದೇಶ ಸಂಖ್ಯೆ : ಇಡಿ ಹೆಚ್ ಪಿ ಸಿ 2024 ಬೆಂಗಳೂರು ದಿನಾಂಕ 04.04.2024

ಪ್ರಸ್ತಾವನೆ :

ಮೇಲಿನ ಕ್ರಮಾಂಕ (01)ರ ಸರ್ಕಾರದ ಆದೇಶಗಳಲ್ಲಿ 2024-25ನೇ ಸಾಲಿನಲ್ಲಿ ಆಡಳಿತ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಆಡಳಿತ ಇಲಾಖೆಗಳಿಗೆ ಬಿಡುಗಡೆಗೊಳಿಸಲು ಅಧಿಕಾರ ಪ್ರತ್ಯಾಯೋಜಸಲಾಗಿದೆ.

ಕ್ರಮಾಂಕ (02)ರ ಸರ್ಕಾರದ ಆದೇಶಗಳಲ್ಲಿ 2024-25ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಗಳಿಗೆ ವೇತನ ಮತ್ತು ವೇತನೇತರ ವೆಚ್ಚಗಳಿಗಾಗಿ ಮೊದಲನೇ ತ್ರೈಮಾಸಿಕ ಅವಧಿಯ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 10 ದಿನಗೂಲಿ ನೌಕರರುಗಳಿಗೆ ಮಾರ್ಚ್-2024, ಏಪ್ರಿಲ್-2024 ಮತ್ತು ಮೇ-2024ರ ಮಾಹೆಗಳ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ ಲೆಕ್ಕಶೀರ್ಷಿಕೆ 2202-03-103-2-01 -033 ದಿನಗೂಲಿ ನೌಕರರ ವೇತನ ರಡಿಯಲ್ಲಿ ಅನುದಾನ ಬಿಡುಗಡೆ ಮಾಡಬೇಕಾಗಿದ್ದು, ಅದರಂತೆ ಈ ಆದೇಶ

**ಆದೇಶ ಸಂಖ್ಯೆ : DCE/BUD/GEN/32/2024 ( E- 1383833) ದಿನಾಂಕ 19.04.2024**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 10 ದಿನಗೂಲಿ ನೌಕರರುಗಳಿಗೆ ಮಾರ್ಚ್-2024, ಏಪ್ರಿಲ್-2024 ಮತ್ತು ಮೇ-2024ರ ಮಾಹೆಗಳ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ ಲೆಕ್ಕಶೀರ್ಷಿಕೆ 2202-03-103-2-01 -033 ದಿನಗೂಲಿ ನೌಕರರ ವೇತನ ರಡಿಯಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಿರುವಂತೆ ಒಟ್ಟು ರೂ 07,29,540/- ( ರೂ ಏಳು ಲಕ್ಷದ ಇಪ್ಪತ್ತೊಂಬತ್ತು ಸಾವಿರದ ಐದುನೂರ ನಲವತ್ತು ಮಾತ್ರ) ಅನ್ನು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಿ ನಿಯಮಾನುಸಾರ ಬಳಕೆ ಮಾಡಲು ಅನುಮತಿ ನೀಡಲಾಗಿದೆ.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

20/4

ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ

ಆದೇಶ ಸಂಖ್ಯೆ : DCE/BUD/GEN/32/2024 ದಿನಾಂಕ 19.04.2024 **ಆದೇಶಕ್ಕೆ** ಅನುಬಂಧ

(ರೂಪಾಯಿಗಳಲ್ಲಿ)

| ಕ್ರ.ಸಂ | ದಿನಗೂಲಿ ನೌಕರರ ಹೆಸರು | ಕಾಲೇಜಿನ ಹೆಸರು | ಮಾರ್ಚ-2024 ರಿಂದ ಮೇ-2024 ವರೆಗಿನ ವೇತನ ಅನುದಾನ | ತುಟ್ಟಿ ಭತ್ಯೆ ಬಾಕಿ | ಬಿಡುಗಡೆ ಮಾಡಿರುವ ಒಟ್ಟು ಅನುದಾನ |
|---|---|---|---|---|---|
| 01 | ಮೂರ್ತಿ ವಿ ಎಲ್ | ಸರ್ಕಾರಿ ವಿಜ್ಞಾನ ಕಾಲೇಜು ಬೆಂಗಳೂರು | 81525 | 1148 | 82673 |
| 02 | ನಾಗರಾಜ ಎಂ | ಸರ್ಕಾರಿ ಆರ್ ಸಿ ಕಾಲೇಜು ಬೆಂಗಳೂರು | 81525 | 1148 | 82673 |
| 03 | ನಾಗರಾಜ್ ಡಿ | ಸ.ಪ್ರ.ದ.ಕಾ ಚಿಂತಾಮಣಿ | 74181 | 1148 | 75329 |
| 04 | ಗಂಗಮ್ಮ | ಸ.ಪ್ರ.ದ.ಕಾ ಮಧುಗಿರಿ | 24727 | 1148 | 25875 |
| 05 | ಜಯ ನರಸಿಂಹಮೂರ್ತಿ | ಸ.ಪ್ರ.ದ.ಕಾ ಕೊರಟಗೆರೆ | 74181 | 1148 | 75329 |
| 06 | ಶಿವಲಿಂಗಯ್ಯ ಎಂ | ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು | 77853 | 1148 | 79001 |
| 07 | ಗಾಯತ್ರಿ ಎಂ ಎಸ್ | ಸ.ಮ.ಕಾ ಮಂಡ್ಯ | 74181 | 1148 | 75329 |
| 08 | ಶಿವಾನಂದ ಸಿ | ಸ.ಪ್ರ.ದ.ಕಾ ಭದ್ರಾವತಿ | 74181 | 1148 | 75329 |
| 09 | ರಂಗಣ್ಣ | ಸ.ಪ್ರ.ದ.ಕಾ ಮಾನ್ವಿ | 74181 | 1148 | 75329 |
| 10 | ಶಂಕರ ಅಡಿವೆಪ್ಪ | ಸರ್ಕಾರಿ ಕಾಲೇಜು ಕಲಬುರಗಿ | 81525 | 1148 | 82673 |
| ಒಟ್ಟು ರೂ | | | 718060 | 11480 | 729540 |

(ರೂ ಏಳು ಲಕ್ಷದ ಇಪ್ಪತ್ತೊಂಬತ್ತು ಸಾವಿರದ ಐದುನೂರ ನಲವತ್ತು ಮಾತ್ರ)

ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ

ಷರತ್ತುಗಳು:

1. ಬಿಡುಗಡೆ ಮಾಡಿರುವ ಅನುದಾನವನ್ನು ಬಳಕೆ ಮಾಡಿಕೊಂಡು ಬಳಕೆ ಪ್ರಮಾಣ ಪತ್ರ ಹಾಗೂ 62ಬಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
2. ಬಿಡುಗಡೆ ಮಾಡಿರುವ ಅನುದಾನ ಶೇಕಡಾ ನೂರರಷ್ಟು ಬಳಕೆ ಮಾಡಿದ ನಂತರವಷ್ಟೇ ಮುಂದಿನ ತಿಂಗಳುಗಳಿಗೆ ಅನುದಾನ ಬಿಡುಗಡೆ ಮಾಡಲಾಗುವುದು.
3. ವೇತನ ಪಾವತಿಗೆ ಸಂಬಂಧಿಸಿದಂತೆ ವಿಳಂಬಕ್ಕೆ ಆಸ್ಪದ ನೀಡದಂತೆ ಪ್ರಥಮ ಆದ್ಯತೆಯ ಮೇರೆಗೆ ಕ್ರಮವಹಿಸುವುದು.
4. ವೇತನ ಬಿಡುಗಡೆ ಮಾಡುವ ಪೂರ್ವದಲ್ಲಿ ಸದರಿ ನೌಕರರು ನಿಯಮಾನುಸಾರ ವೇತನ ಪಡೆಯಲು ಅರ್ಹರಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ತಪ್ಪಾದ ಪಾವತಿಗೆ ಸಂಬಂಧಪಟ್ಟ ಜಂಟಿ ನಿರ್ದೇಶಕರು ಹಾಗೂ ಅಧಿಕಾರಿ ಮತ್ತು ಸಿಬ್ಬಂದಿಗಳು ಜವಾಬ್ದಾರರಾಗುವರು
5. ನಿಯಮಾನುಸಾರ ಆದಾಯತೆರಿಗೆ ಕಟಾಯಿಸಲು ಕ್ರಮವಹಿಸುವುದು.

6. ಕಾಲಕಾಲಕ್ಕೆ ಸರ್ಕಾರ ಇಲಾಖೆ ಹೊರಡಿಸುವ ಆದೇಶ ಸುತ್ತೋಲೆಗಳನ್ನು ಪಾರಮರ್ಶಿಸಿ ಅದರಂತೆ ಕ್ರಮವಹಿಸುವುದು.
7. ಅನವಶ್ಯಕವಾಗಿ ವೇತನ ತಡೆಹಿಯದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಮುಂದುವರೆದು ವೇತನ ತಡೆಹಿಡಿಯುವ ಪೂರ್ವದಲ್ಲಿ ಸೂಕ್ತ ಕಾರಣಗಳೊಂದಿಗೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸತಕ್ಕದ್ದು, ಈ ಸಂಬಂಧ ದೂರುಗಳು ಸ್ವೀಕೃತವಾದಲ್ಲಿ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.
8. ಉಲ್ಲೇಖಿತ ಸರ್ಕಾರದ ಆದೇಶಗಳಲ್ಲಿನ ಎಲ್ಲಾ ಷರತ್ತು /ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಇವರಿಗೆ:

ಅನುಬಂಧದಲ್ಲಿ ನಮೂದಿಸಿರುವ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರು

ಪ್ರತಿಗಳು:

1. ಲೆಕ್ಕಾಧಿಕಾರಿಗಳು ಕಾಲೇಜು ಶಿಕ್ಷಣ ಇಲಾಖೆ ಕೇಂದ್ರ ಕಛೇರಿ ಬೆಂಗಳೂರು-ಮಾಹಿತಿಗಾಗಿ
2. ಸಂಬಂಧಪಟ್ಟ ಖಜಾನಾಧಿಕಾರಿಗಳಿಗೆ- ಮಾಹಿತಿಗಾಗಿ
3. ಮ್ಯಾನೇಜರ್/ ಅಧೀಕ್ಷಕರು ಮಾಹಿತಿ ತಂತ್ರಜ್ಞಾನ ವಿಭಾಗ, ಶಿಕ್ಷಣ ಇಲಾಖೆ ಕೇಂದ್ರ ಕಛೇರಿ ಬೆಂಗಳೂರು-ಇಲಾಖಾ ಜಾಲತಾಣದಲ್ಲಿ ಪ್ರಕಡಿಸಲು
4. ಕಛೇರಿ ಪ್ರತಿ/ಹೆಚ್ಚಿನ ಪ್ರತಿ